ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಆರೋಗ್ಯ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಆರು ವೈದ್ಯಾಧಿಕಾರಿಗಳ ಹುದ್ದೆಗಳನ್ನು ನಾವು ತುಂಬಿದ್ದೇವೆ. ಆದರೆ ಇನ್ನು 26 ಅರೆವೈದ್ಯಕೀಯ ಹುದ್ದೆಗಳು ಅಲ್ಲಿ ಖಾಲಿ ಇವೆ, ಅದನ್ನು ತುಂಬುವ ಪ್ರಕ್ರಿಯೆಯನ್ನು ಈಗಾಗಲೇ ನಾವು ಪ್ರಾರಂಭಿಸಿದ್ದೇವೆ. 22ನೇ ತಾರೀಖು objection call for ಮಾಡಿದ್ದೇವೆ. ಅದು ಮುಕ್ತಾಯವಾಗುತ್ತದೆ. 23ನೇ ತಾರೀಖಿನಿಂದ 5,021 ಹುದ್ದೆಗಳಿಗೆ ಅರ್ಜಿಗಳನ್ನು ನಾವು ಆಹ್ವಾನ ಮಾಡುತ್ತೇವೆ. ನಂತರ ಮೂರು ತಿಂಗಳಲ್ಲಿ ಅವರ ನೇಮಕಾತಿ ಪ್ರಕ್ರಿಯೆಯನ್ನು ಮುಗಿಸಬೇಕೆಂದು ನಾವು ಕಾರ್ಯಯೋಜನೆಯನ್ನು ಹಾಕಿಕೊಂಡಿರುತ್ತೇವೆ. ಮಂಗಳೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಖಾಲಿಯಾಗುವ ಆ 26 ಹುದ್ದೆಗಳನ್ನು ಆ ಸಂದರ್ಭದಲ್ಲಿ ತುಂಬುವುದಕ್ಕೆ ಸಹಾ ನಾವು ಕ್ರಮವನ್ನು ಕೈಗೊಳ್ಳುತ್ತೇವೆ.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಕೆ.ಎಸ್.ಈಶ್ವರಪ್ಪ (ಮಾನ್ಯ ಇಂಧನ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ: 19.2.2009ರ ಒಂದನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 25 ಪ್ರಶ್ನೆಗಳ ಪೈಕಿ 21 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.

3. <u>ಸಭೆಯ ಮುಂದಿಡಲಾದ ಕಾಗದ ಪತ್ರಗಳು</u>

ಅಧ್ಯಕ್ಷರು: ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಅ) ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು)ಅವರು:–

ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 151 (2)ನೇ ಅನುಚ್ಛೇದದ ಮೇರೆಗೆ 31ನೇ ಮಾರ್ಚ್ 2008ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು ನೀಡಿರುವ ಧನವಿನಿಯೋಗ ಹಾಗೂ ಹಣಕಾಸು ಲೆಕ್ಕಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಆ) ಶ್ರೀ ಬಿ.ಎಸ್.ಯಡಿಯುರಪ್ಪ (ಮುಖ್ಯಮಂತ್ರಿಗಳು)ಅವರು:–

ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 151 (2)ನೇ ಅನುಚ್ಛೇದದ ಮೇರೆಗೆ ಭಾರತದ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು 31ನೇ ಮಾರ್ಚ್ 2003ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಲೆಕ್ಕ ಪರಿಶೋಧನಾ (ರಾಜಸ್ವ ಸ್ವೀಕೃತಿ) ವರದಿಯನ್ನು ಸಭೆಯ ಮುಂದಿಡುತ್ತಿದ್ದೇನೆ.

ಅಧ್ಯಕ್ಷರು: ಕಾಗದ ಪತ್ರಗಳನ್ನು ಮಂಡಿಸಲಾಯಿತು.

ಈಗ ಸದನವನ್ನು ಸಂಜೆ 4.00 ಗಂಟೆಗೆ ಸೇರುವಂತೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 2.15 ಗಂಟೆಗೆ ಮುಕ್ತಾಯಗೊಂಡು ಪುನಃ 4.00 ಗಂಟೆಗೆ ಸೇರಲು ನಿಶ್ಚಯಿಸಿತು)

4-00 PM

ಸದನವು ಪುನಃ ಮಧ್ಯಾಹ್ನ 4 ಗಂಟೆ 15 ನಿಮಿಷಕ್ಕೆ ಸಮಾವೇಶಗೊಂಡಿತು. ಮಾನ್ಯ ಅಧ್ಯಕ್ಷರಾದ ಶ್ರೀ ಜಗದೀಶ್ ಶೆಟ್ಟರ್ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

4. ನಿಲುವಳಿ ಸೂಚನೆಗೆ ಅನುಮತಿ ಕೋರಿ ಚರ್ಚೆ.

ವಿಷಯ: ರಾಜ್ಯದಲ್ಲಿ ಕುಸಿಯುತ್ತಿರುವ ಕಾನೂನು ಸುವ್ಯವಸ್ಥೆ ಬಗ್ಗೆ.

ಅಧ್ಯಕ್ಷರು: ಮಾನ್ಯ ವಿರೋಧಪಕ್ಷದ ನಾಯಕರೆ, ನಿಲುವಳಿ ಸೂಚನೆ ಬಗ್ಗೆ ಪ್ರಸ್ತಾಪ ಮಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ತಮ್ಮ ಗಮನಕ್ಕೆ ಮತ್ತು ಸದನದ ಗಮನಕ್ಕೆ ನಾನು ನಿಲುವಳಿಸೂಚನೆ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಏಕೆ ಇದನ್ನು ಚರ್ಚೆಗೆ ತೆಗೆದುಕೊಳ್ಳವಂತಹ ಅಶ್ಯಕತೆ ಇದೆ ಎಂದರೆ, ಇತ್ತೀಚೆಗೆ ಅನೇಕ ಘಟನೆಗಳು ರಾಜ್ಯದಲ್ಲಿ ನಡೆದಿವೆ. ಇದರಿಂದ ಇವತ್ತು ಕುಸಿಯುತ್ತಿರುವ ಕಾನೂನಿನ ವ್ಯವಸ್ಥೆ, ಈ ರಾಜ್ಯದ ಆಡಳಿತ ಇವೆಲ್ಲವನ್ನೂ ನೋಡಿದಾಗ ಎಲ್ಲೋ ಒಂದು ಕಡೆ ನಮ್ಮ ಲಕ್ಷ್ಯ ಕಾನೂನು ವ್ಯವಸ್ಥೆ ಮೇಲೆ ಇಲ್ಲವೆನ್ನುವುದು ಸಹಜವಾಗಿ ಕಾಣುತ್ತದೆ. ಆದರೆ, ಬಿ.ಜೆ.ಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಬಹಳ ಬಿಗುವಾಗಿ ನಡೆದುಕೊಳ್ಳುತ್ತಾರೆ. ಸಮ್ಮಿಶ್ರ ಸರ್ಕಾರ ಇದ್ದಾಗ ಅವರಿಗೆ ತೊಂದರೆಯಿತ್ತು. ಈಗ ಸ್ವತಂತ್ರವಾಗಿ ಸರ್ಕಾರ ರಚನೆ ಮಾಡಿಕೊಂಡು ಅವರು ಈ ಒಂದು ಆಡಳಿತದಲ್ಲಿ ಕಾನೂನು ವ್ಯವಸ್ಥೆಯನ್ನು ಚೆನ್ನಾಗಿ ತರುತ್ತಾರೆಂದು ನಾವು ನಂಬಿದ್ದೆವು. ಆದರೆ, ಇವತ್ತು ರಾಜ್ಯದ ಉದ್ದಗಲಕ್ಕೂ ನೀವು ಎಲ್ಲಾದರೂ ಹೋಗಿ, ಗಲಾಟೆ, ಗದ್ದಲ, firing, ಲಾಟಿ ಚಾರ್ಜ್ ಅಷ್ಟೇ ಅಲ್ಲ, ಅಮಾಯಕರ ಮೇಲೆ, ರೈತರ ಮೇಲೆ ಕೈ ಎತ್ತುವ ಪ್ರವೃತ್ತಿ ಪೊಲೀಸರಿಗೆ ಬಂದಿದೆ. ವಿಶೇಷವಾಗಿ ಉಡುಪಿ, ಶಿವಮೊಗ್ಗ ಹಾಗೂ ಧಾರವಾಡದಲ್ಲೂ ಕೂಡ ಈ ಒಂದು ಮತೀಯ ಭಾವನೆ ಕೆರಳಿಸತಕ್ಕಂಥದ್ದು, ಜನರನ್ನು ಎತ್ತಿ ಕಟ್ಟುವಂತಥದ್ದು ಮತ್ತು ಅದರ ವಿರುದ್ಧಾಗಿ ಜನರನ್ನು ಪ್ರಚೋದಿಸಿ ಉತ್ತೇಜಿಸುವ ವ್ಯವಸ್ಥೆ ಕೂಡ ಸರ್ಕಾರ ಮತ್ತು ಸರ್ಕಾರದಲ್ಲಿ ಯಾವ ಪಕ್ಷವಿದೆ, ಅವರೂ ಕೂಡ ಇದನ್ನೇ ಮಾಡುತ್ತಿದ್ದಾರೆ. ಅದರ ಜೊತೆಯಲ್ಲಿ ವ್ಯವಸ್ಥಿತವಾಗಿ ಕಾನೂನನ್ನು ಹದಿಗೆಡಿಸುವುದಕ್ಕೆ ಏನೇನು ಪಿತೂರಿ ಮಾಡಬೇಕು ಅದೆಲ್ಲವನ್ನೂ ಬಿ.ಜೆ.ಪಿ ಸರ್ಕಾರ ಮಾಡುತ್ತಿದೆ ಎನ್ನುವ ಮಾತನ್ನು ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಯಾವುದೋ ಒಂದು ಕಾರಣದಿಂದ